ಕಲಿಕೆಗಾಗಿ ಹೊಸ ಹಾದಿ ತೆರೆಯೋಣ

ಮುನ್ನಡೆಯುವ

BRIDGE MATERIALS FOR CLASS VI

ತರಗತಿ – 6

ಗಣಿತ

(MATHEMATICS)

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಎಸ್.ಸಿ.ಇ.ಆರ್.ಟಿ.)
ಕೇರಳ
2022

ಆತ್ಮೀಯ ಮಕ್ಕಳೇ,

ಕಳೆದ ಎರಡು ಶೈಕ್ಷಣಿಕ ವರ್ಷಗಳಲ್ಲಿ (2020–21 ಮತ್ತು 2021–22) ಕೋವಿಡ್‌ನಿಂದಾಗಿ ಶಾಲೆಗಳನ್ನು ಸಂಪೂರ್ಣವಾಗಿ ತೆರೆಯಲಾಗಲಿಲ್ಲ. ಆದ್ದರಿಂದ ಪ್ರತಿ ತರಗತಿಯಲ್ಲಿ ಕಲಿಯಬೇಕಾದ ಆಶಯಗಳು ಮತ್ತು ಕೌಶಲ್ಯಗಳನ್ನು ಪಡೆದುಕೊಳ್ಳುವಲ್ಲಿ ಕೆಲವು ಲೋಪಗಳು ಕಂಡುಬಂದಿವೆ. ಕಾಲುವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳ ವಿಶ್ಲೇಷಣೆ ಮತ್ತು ಶಿಕ್ಷಕರೊಂದಿಗೆ ಸಂವಾದದ ಆಧಾರದ ಮೇಲೆ ಇದು ಕಂಡುಬಂದಿದೆ. ಪರಿಣಾಮಕಾರಿಯಾಗಿ ಮುಂದುವರಿದ ಶಿಕ್ಷಣವನ್ನು ಸಕ್ರಿಯಗೊಳಿಸಲು ಈ ಕಲಿಕೆಯ ಅಂತರವನ್ನು ಪರಿಹರಿಸುವುದು ಅತ್ಯಗತ್ಯ. ಪ್ರತಿ ತರಗತಿಯ ಪಾಠಗಳನ್ನು ಕಲಿಯುವ ಪೂರ್ವಜ್ಞಾನವನ್ನು ಖಚಿತಪಡಿಸಿಕೊಳ್ಳುವುದು ಉತ್ತಮ. ಇದು ಪ್ರತಿ ತರಗತಿಗೆ ಅಗತ್ಯವಾದ ಪೂರ್ವಜ್ಞಾನವನ್ನು ಖಚಿತಪಡಿಸಿಕೊಳ್ಳಲು ಚಟುವಟಿಕೆಗಳನ್ನು ಒಳಗೊಂಡಿರುವ ಕಿರು ಪುಸ್ತಕ ಆಗಿದೆ. ಆ ಪುಸ್ತಕದಲ್ಲಿನ ಚಟುವಟಿಕೆಗಳನ್ನು ನಿಮ್ಮ ಸ್ವಂತ ಅಥವಾ ಶಿಕ್ಷಕರ ಸಹಾಯದಿಂದ ಪೂರ್ಣಗೊಳಿಸಬೇಕು. ಕಲಿಕೆಯ ಅಂತರವನ್ನು ಪರಿಹರಿಸಲು ಮತ್ತು ನಿಮ್ಮ ಅಧ್ಯಯನವನ್ನು ಹೆಚ್ಚು ಆತ್ಮವಿಶ್ವಾಸದಿಂದ ಮುಂದುವರಿಸಲು ನಾನು ಬಯಸುತ್ತೇನೆ.

ನಿರ್ದೇಶಕರು

ಎಸ್.ಸಿ.ಇ.ಆರ್.ಟಿ.

1. ಕೋನಗಳು – 1

- ಗೆರೆಯ ಉದ್ದವನ್ನು ನಿಖರವಾಗಿ ಅಳೆದು ಬರೆಯಿರಿ.

- ಆಕೃತಿಗಳ ಹೆಸರು ಬರೆಯಿರಿ. ಮೊದಲ ಮೂರು ಚಿತ್ರಗಳ ಪ್ರತಿಯೊಂದು ಭುಜದ ಅಳತೆಯನ್ನು ಅಳೆದು ಬರೆಯಿರಿ.



- ಕೆಳಗೆ ನೀಡಿರುವ ಆಕೃತಿಗಳ ಸುತ್ತಳತೆಯನ್ನು ಕಂಡುಹಿಡಿಯಿರಿ. ಅಳತೆಗಳು ಸೆಂಟಿಮೀಟರಿನಲ್ಲಿದೆ.

1. ತ್ರಿಕೋನ 2. ಆಯತ 3. ಚೌಕ



- ಒಂದು ಆಯತದ ಉದ್ದ ಮತ್ತು ಅಗಲವನ್ನು ಕೂಡಿಸಿದಾಗ 36 ಸೆಂಟಿಮೀಟರ್ ಸಿಕ್ಕಿತು. ಅದರ ಸುತ್ತಳತೆ ಎಷ್ಟು?

- ಒಂದು ಆಯತದ ಉದ್ದ 10 ಸೆಂಟಿಮೀಟರ್ ಸುತ್ತಳತೆ 34 ಸೆಂಟಿಮೀಟರ್ ಆಗಿದೆ. ಅದರ ಅಗಲ ಎಷ್ಟು?

- ಈ ಕೆಳಗಿನ ಆಕೃತಿ ಒಂದು ಆಯತವಲ್ಲದಿರಲು ಕಾರಣವೇನು?



ಕೋನಗಳು – 2

- ಕೆಳಗೆ ನೀಡಿರುವ ಚಿತ್ರಗಳಲ್ಲಿ ಎಲ್ಲಾ ಮೂಲೆಗಳು ಲಂಬಕೋನಗಳಾಗಿರುವವುಗಳು ಯಾವುವೆಲ್ಲಾ ಎಂದು ಊಹಿಸಿರಿ. ಮಟ್ಟವನ್ನು ಇಟ್ಟು ಪರಿಶೋಧಿಸಿರಿ. ಮೊದಲ ಚಿತ್ರದಲ್ಲಿ ಒಂದು ಲಂಬಕೋನವನ್ನು ಗುರುತಿಸಿರುವುದನ್ನು ನೋಡಿರಿ. ಅದೇ ರೀತಿಯಲ್ಲಿ ಚಿತ್ರಗಳಲ್ಲಿನ ಲಂಬಕೋನಗಳನ್ನು ಗುರುತಿಸಿರಿ.



- ಕೆಳಗೆ ಕೊಟ್ಟಿರುವ ಚಿತ್ರಗಳಲ್ಲಿ ಲಂಬಕೋನಕ್ಕಿಂತ ಚಿಕ್ಕದು, ಲಂಬಕೋನಕ್ಕಿಂತ ದೊಡ್ಡದು, ಲಂಬಕೋನ ಎಂಬಿವುಗಳನ್ನು ಕಂಡುಹಿಡಿದು ಬರೆಯಿರಿ.



- - - - - - - - - -   - - - - - - - - - -   - - - - - - - - - -

- ಒಂದು ಮೂಲೆ ಲಂಬಕೋನವಾಗಿರುವಂತೆ ಒಂದು ತ್ರಿಕೋನ ರಚಿಸಿರಿ.

2. ಸರಾಸರಿ – 1

- ಕೆಲವು ಸಂಖ್ಯೆಗಳ ಮೊತ್ತವನ್ನು ಲೆಕ್ಕ ಹಾಕಿರುವುದನ್ನು ನೋಡಿರಿ.

$63 + 64 + 69 + 73 + 75 + 70 = 60 + 60 + 60 + 70 + 70 + 70 + 3 + 4 + 9 + 3 + 5$

$= 390 + 24$

$= 414$

$(3 \times 60) + (3 \times 70) + 24$	$(6 \times 60) + (3 \times 10) + 24$
$= 180 + 210 + 24$	$= 360 + 30 + 24$
$= 414$	$= 414$

ಇನ್ನು ಇತರ ಯಾವೆಲ್ಲಾ ರೀತಿಯಲ್ಲಿ ಲೆಕ್ಕ ಹಾಕಬಹುದು.

- ಕೆಳಗೆ ಕೊಟ್ಟಿರುವ ಸಂಖ್ಯೆಗಳ ಮೊತ್ತವನ್ನು ವ್ಯತ್ಯಸ್ತ ರೀತಿಯಲ್ಲಿ ಕಂಡುಹಿಡಿಯಿರಿ.

1. 112, 117, 109, 120, 112, 115, 105

2. 1008, 1012, 1024, 1007, 1030

ಸರಾಸರಿ – 2

- ಒಂದು ಪುಸ್ತಕಕ್ಕೆ 72 ರೂಪಾಯಿಯಾದರೆ 16 ಪುಸ್ತಕದ ಬೆಲೆ ಎಷ್ಟು?

  ಕಂಡುಹಿಡಿಯಬೇಕಾದುದು 16×72 ಅಲ್ಲವೇ?

$$16 \times 72 = (10 \times 72) + (6 \times 72)$$
$$= 720 + 432 \quad (6 \times 70 = 420, 6 \times 2 = 12)$$
$$= 1152$$

	70	2
10	700	20
6	420	12

→ 700 + 420 + 20 + 12 = **1152**

- 64 ರೂಪಾಯಿಯಂತೆ 22 ಮಂದಿಗೆ ಕೊಡಲು ಒಟ್ಟು ಎಷ್ಟು ರೂಪಾಯಿ ಬೇಕು?

$$64 \times 22 = (20 \times 64) + (2 \times 64)$$
$$= 1280 + 128$$
$$= 1408$$

	60	4
20	1200	80
2	120	8

→ 1200 + 80 + 120 + 8 = **1408**

- ಕೆಳಗೆ ಕೊಟ್ಟಿರುವವುಗಳ ಗುಣಲಬ್ಧವನ್ನು ಹಲವು ರೀತಿಯಲ್ಲಿ ಲೆಕ್ಕ ಹಾಕಿರಿ.
  - 14×25
  - 18×35
  - 28×15

ಸರಾಸರಿ – 3

- 312 ರೂಪಾಯಿಯನ್ನು 12 ಮಂದಿಗೆ ಸಮಾನವಾಗಿ ಹಂಚಿದರೆ ಒಬ್ಬರಿಗೆ ಎಷ್ಟು ರೂಪಾಯಿ ಲಭಿಸಬಹುದು?

  312 ನ್ನು 12ರಿಂದ ಭಾಗಿಸಬೇಕಲ್ಲವೇ?

- 312 ÷ 12

  3 ನೂರು ರೂಪಾಯಿಯನ್ನು 12 ಮಂದಿಗೆ ಕೊಡಲು ಸಾಧ್ಯವಿಲ್ಲ. ಅದನ್ನು 10 ರೂಪಾಯಿಯಾಗಿ ಮಾಡಬೇಕು. ಮೊದಲಿನ ಒಂದು ಹತ್ತು ರೂಪಾಯಿ ಕೂಡಾ ಸೇರಿ. 31 ಹತ್ತು ರೂಪಾಯಿಯನ್ನು 12 ಮಂದಿಗೆ ಕೊಟ್ಟರೆ ಒಬ್ಬರಿಗೆ 2 ಹತ್ತು ರೂಪಾಯಿ ಸಿಗುವುದು. ಬಾಕಿ 7 ಹತ್ತು ರೂಪಾಯಿಯಿದೆ. ಇದನ್ನು 1 ರೂಪಾಯಿಯಾಗಿ ಮಾಡಿದರೆ 70 ಒಂದು ರೂಪಾಯಿ ಮತ್ತು ಮೊದಲಿದ್ದ 2 ರೂಪಾಯಿಯನ್ನು ಕೂಡಾ ಸೇರಿಸಿದರೆ 72 ರೂಪಾಯಿ. ಇದನ್ನು 12 ಮಂದಿಗೆ ಕೊಟ್ಟರೆ ಒಬ್ಬರಿಗೆ 6 ರೂಪಾಯಿಯಂತೆ ಸಿಗುವುದು. ಹೀಗೆ ಒಬ್ಬರಿಗೆ 2 ಹತ್ತು ರೂಪಾಯಿ ಮತ್ತು 6 ಒಂದು ರೂಪಾಯಿ ಸೇರಿ ಒಟ್ಟು 26 ರೂಪಾಯಿ ಲಭಿಸುವುದು.

```
      26
   ┌────
12 │312
   │24
   └────
     72
     72
    ════
```

- 312 ÷ 12

  ಒಬ್ಬರಿಗೆ 10 ರೂಪಾಯಿಯಂತೆ ಕೊಟ್ಟರೆ ಬಾಕಿ 312 – 120 = 192. ಇನ್ನೊಂದು ಸಲ 10 ರೂಪಾಯಿಯಂತೆ ಕೊಟ್ಟರೆ 192 – 120 = 72. ಬಳಿಕ 6 ರೂಪಾಯಿಯಂತೆ ಕೊಟ್ಟರೆ 72 – 72 = 0. ಒಟ್ಟು ಸಿಗುವ ಮೊತ್ತ 10 + 10 + 6 = 26

- 405 ಕಿಲೋಗ್ರಾಂ ಅಕ್ಕಿಯನ್ನು 15 ಕುಟುಂಬಗಳಿಗೆ ಸಮಾನವಾಗಿ ಹಂಚಿದರೆ ಒಂದು ಕುಟುಂಬಕ್ಕೆ ಎಷ್ಟು ಕಿಲೋಗ್ರಾಂ ಅಕ್ಕಿ ಲಭಿಸುವುದು.

- 484 ಸೆಂಟಿಮೀಟರ್ ಉದ್ದವಿರುವ ಒಂದು ಹಗ್ಗದಿಂದ 15 ಸೆಂಟಿಮೀಟರ್‌ನಂತೆ ಉದ್ದವಿರುವ ತುಂಡುಗಳನ್ನು ಕತ್ತರಿಸಿ ತೆಗೆದರೆ ಎಷ್ಟು ತುಂಡುಗಳು ಸಿಗಬಹುದು?

  ಎಷ್ಟು ಸೆಂಟಿಮೀಟರ್ ಉದ್ದದ ಹಗ್ಗ ಬಾಕಿಯಿರಬಹುದು?

3. ಭಿನ್ನರಾಶಿಗಳು – 1

ಸೂಚನೆಯಂತೆ ಬಣ್ಣ ಹಚ್ಚಿರಿ.

ಭಾಗವನ್ನು ಸೂಚಿಸುವ ಭಿನ್ನರಾಶಿಯನ್ನು ಬರೆಯಿರಿ.

- ಒಂದನ್ನು ನಾಲ್ಕು ಪಾಲು ಮಾಡಿ ಅದರಲ್ಲಿ ಒಂದು ಭಾಗ  - - - - -

- ಒಂದನ್ನು ಮೂರು ಪಾಲು ಮಾಡಿ ಅದರಲ್ಲಿ ಎರಡು ಭಾಗ  - - - - -

- ಒಂದನ್ನು ಆರು ಪಾಲು ಮಾಡಿ ಅದರಲ್ಲಿ ಮೂರು ಭಾಗ  - - - - = - - - -

- ಒಂದನ್ನು 8 ಪಾಲು ಮಾಡಿ ಅದರಲ್ಲಿ ಎರಡು ಭಾಗ  - - - - - = - - - - -

- ಶೇಡ್ ಮಾಡಿದ ಭಾಗವನ್ನು ವಿವರಿಸಿರಿ. ಭಿನ್ನರಾಶಿಯನ್ನು ಬರೆಯಿರಿ. (ಸಮಾನವಾಗಿ ಪಾಲು ಮಾಡಲಾಗಿದೆ)

 - - - - - - - - - - - - - - - - = - - - - -

 - - - - - - - - - - - - = - - - - -

 - - - - - - - - - - - - = - - - - -

- ಈ ಭಿನ್ನರಾಶಿಗಳನ್ನು ವಿವರಿಸಿರಿ. (ನೋಟು ಪುಸ್ತಕದಲ್ಲಿ ಬರೆಯಿರಿ)

$\frac{1}{8}$; $\frac{5}{7}$; $\frac{4}{10}$; $\frac{12}{15}$; $\frac{13}{20}$

ಭಿನ್ನರಾಶಿಗಳು – 2

- ಪ್ರತಿಯೊಂದರಲ್ಲೂ ಶೇಡ್ ಮಾಡಿದ ಭಾಗವನ್ನು ಸೂಚಿಸುವ ಭಿನ್ನರಾಶಿಯನ್ನು ಬರೆಯಿರಿ.



- ಈ ಕೆಳಗಿನ ಭಿನ್ನರಾಶಿಗಳ ಕುರಿತು ನೀವು ಕಂಡುಕೊಂಡ ವಿಚಾರಗಳೇನು?

$\frac{1}{2}$ $\frac{2}{4}$ $\frac{4}{8}$ $\frac{8}{16}$

- ಇದೇ ರೀತಿ ಕೆಳಗೆ ಕೊಟ್ಟಿರುವ ಭಿನ್ನರಾಶಿಗಳನ್ನು ಮೂರು ರೀತಿಯಲ್ಲಿ ಬರೆಯಿರಿ.

$\frac{1}{3}$ = --------- = --------- = ---------

$\frac{2}{5}$ = --------- = --------- = ---------

$\frac{3}{5}$ = --------- = --------- = ---------

- ಒಂದು ಭಿನ್ನರಾಶಿಯನ್ನು ಹಲವು ರೀತಿಯಲ್ಲಿ ಹೇಗೆ ಬರೆಯಬಹುದು?

- ಇವುಗಳಲ್ಲಿ ಸಮಾನ ಭಿನ್ನರಾಶಿಗಳು ಯಾವುವು?

$\frac{1}{5}$ $\frac{3}{10}$ $\frac{2}{10}$ $\frac{4}{20}$ $\frac{3}{15}$ $\frac{5}{15}$

ಭಿನ್ನರಾಶಿಗಳು – 3

- ಪ್ರತಿಯೊಂದರಲ್ಲೂ ಶೇಡ್ ಮಾಡಿದ ಭಾಗವನ್ನು ಸೂಚಿಸುವ ಭಿನ್ನರಾಶಿಯನ್ನು ಬರೆಯಿರಿ.



- ಒಂದೇ ರೀತಿಯ ಎರಡು ವೃತ್ತಗಳನ್ನು 3 ಪಾಲು ಮಾಡಿರುವುದನ್ನು ನೋಡಿರಿ.



ಪ್ರತಿ ಪಾಲು ಒಂದು ವೃತ್ತದ $\frac{2}{3}$ ಭಾಗವಾಗಿದೆ. $\frac{2}{3}$ ನ್ನು 2 ರೀತಿಯಲ್ಲಿ ವ್ಯಾಖ್ಯಾನಿಸಬಹುದು.

1. ಒಂದು ವಸ್ತುವನ್ನು 3 ಪಾಲು ಮಾಡಿ ಅದರಲ್ಲಿ ಎರಡು ಭಾಗ
2. ಎರಡು ವಸ್ತುವನ್ನು 3 ಪಾಲು ಮಾಡಿ ಅದರಲ್ಲಿ ಒಂದು ಭಾಗ

ಇನ್ನು 3 ವೃತ್ತವನ್ನು 4 ಪಾಲು ಮಾಡಿ ನೋಡಿರಿ.



ಪ್ರತಿ ಪಾಲು ಒಂದು ವೃತ್ತದ $\frac{3}{4}$ ಭಾಗವಾಗಿದೆ.

$\frac{3}{4}$ → ಒಂದನ್ನು 4 ಪಾಲು ಮಾಡಿ ಅದರಲ್ಲಿ 3 ಭಾಗ

→ 3 ವಸ್ತುವನ್ನು 4 ಆಗಿ ಮಾಡಿ ಅದರಲ್ಲಿ ಒಂದು ಭಾಗ

ಇನ್ನು ಈ ಭಿನ್ನರಾಶಿಗಳನ್ನು ಎರಡು ರೀತಿಯಲ್ಲಿ ವ್ಯಾಖ್ಯಾನಿಸಿರಿ.

$\frac{3}{5}$	
$\frac{4}{7}$	

ಭಿನ್ನರಾಶಿಗಳು – 4

- $\frac{2}{3}$; $\frac{3}{5}$ ಇವುಗಳಲ್ಲಿ ದೊಡ್ಡದು ಯಾವುದು?

$\frac{2}{3} = \frac{4}{6} = \frac{6}{9} = \frac{8}{12} = \frac{10}{15}$

$\frac{3}{5} = \frac{6}{10} = \frac{9}{15}$

- $\frac{9}{15}$, $\frac{10}{15}$ ಇವುಗಳಲ್ಲಿ $\frac{10}{15}$ ದೊಡ್ಡದಲ್ಲವೇ? ಆದುದರಿಂದ ದೊಡ್ಡದು $\frac{2}{3}$ ಆಗಿದೆ.

ಇದೇ ರೀತಿಯಲ್ಲಿ ಕೆಳಗೆ ಕೊಟ್ಟಿರುವ ಭಿನ್ನರಾಶಿಗಳಲ್ಲಿ ದೊಡ್ಡದು ಮತ್ತು ಸಣ್ಣದು ಯಾವುದೆಂದು ಕಂಡುಹಿಡಿಯಿರಿ.

- $\frac{2}{3}$; $\frac{3}{4}$

$\frac{2}{3}$ = -------, -------, -------, -------

$\frac{3}{4}$ = -------, -------, -------, -------

- $\frac{5}{6}$; $\frac{3}{5}$

$\frac{5}{6}$ = -------, -------, -------, -------

$\frac{3}{5}$ = -------, -------, -------, -------

- $\frac{3}{3}$; $\frac{5}{6}$

- ಎಲ್ಲಾ ಭಿನ್ನರಾಶಿಗಳನ್ನು ಬರೆಯದೆ ಎರಡರ ಛೇದವನ್ನು ಒಂದೇ ರೀತಿ ಮಾಡಲು ಬೇರೆ ಯಾವ ಮಾರ್ಗಗಳಿವೆ?

ಭಿನ್ನರಾಶಿಗಳು – 5

ಪ್ರತಿಯೊಂದು ಜೋಡಿಯಲ್ಲೂ ದೊಡ್ಡದು ಮತ್ತು ಸಣ್ಣದನ್ನು ಕಂಡುಹಿಡಿಯಿರಿ. ಮೊತ್ತ ಮತ್ತು ವ್ಯತ್ಯಾಸವನ್ನು ಕಂಡುಹಿಡಿದು ಬರೆಯಿರಿ.

- $\frac{3}{8}$; $\frac{2}{5}$

$\frac{3}{8} = \frac{5 \times 3}{5 \times 8} = \frac{15}{40}$	$\frac{2}{5} = \frac{8 \times 2}{8 \times 5} = \frac{16}{40}$

ದೊಡ್ಡದು $\frac{2}{5}$, ಸಣ್ಣದು $\frac{3}{8}$

ಮೊತ್ತ $= \frac{15}{40} + \frac{16}{40} = \frac{31}{40}$, ವ್ಯತ್ಯಾಸ $= \frac{16}{40} - \frac{15}{40} = \frac{1}{40}$

- $\frac{3}{7}$; $\frac{4}{9}$

$\frac{3}{7} = \frac{27}{63}$	$\frac{4}{9} = \frac{28}{63}$

ದೊಡ್ಡದು $\frac{4}{9}$, ಸಣ್ಣದು $\frac{3}{7}$

ಮೊತ್ತ = __________, ವ್ಯತ್ಯಾಸ = __________

- $\frac{5}{9}$; $\frac{4}{5}$

ದೊಡ್ಡದು : __________ ಸಣ್ಣದು : __________
ಮೊತ್ತ : __________ ವ್ಯತ್ಯಾಸ : __________

- $\frac{3}{11}$; $\frac{2}{5}$

ದೊಡ್ಡದು : __________ ಸಣ್ಣದು : __________
ಮೊತ್ತ : __________ ವ್ಯತ್ಯಾಸ : __________

- $\frac{5}{12}$; $\frac{3}{4}$

ದೊಡ್ಡದು : __________ ಸಣ್ಣದು : __________
ಮೊತ್ತ : __________ ವ್ಯತ್ಯಾಸ : __________

- $\frac{2}{5}$; $\frac{3}{10}$

ದೊಡ್ಡದು : __________ ಸಣ್ಣದು : __________
ಮೊತ್ತ : __________ ವ್ಯತ್ಯಾಸ : __________

5. ದಶಮಾಂಶ ರೂಪಗಳು – 1

10 ಮಿಲ್ಲಿ ಮೀಟರ್ =1 ಸೆಂಟಿಮೀಟರ್ 100 ಸೆಂಟಿಮೀಟರ್ = 1 ಮೀಟರ್ 1000 ಮೀಟರ್ = 1 ಕಿಲೋಮೀಟರ್	1000 ಮಿಲ್ಲಿ ಲೀಟರ್ = 1 ಲೀಟರ್	1000 ಮಿಲ್ಲಿ ಗ್ರಾಂ = 1 ಗ್ರಾಂ 1000 ಗ್ರಾಂ = 1ಕಿಲೋ ಗ್ರಾಂ 1000 ಕಿಲೋಗ್ರಾಂ = 1 ಟನ್

ಕೆಳಗೆ ಕೊಟ್ಟಿರುವವುಗಳನ್ನು ಪೂರ್ತಿಗೊಳಿಸಿರಿ.

34 ಮಿಲ್ಲಿಮೀಟರ್ = _ _ _ _ _ _ _ _ _ _ _ _ _ _ ಸೆಂಟಿಮೀಟರ್ _ _ _ _ _ _ _ _ _ _ _ _ _ _ ಮಿಲ್ಲಿಮೀಟರ್

256 ಸೆಂಟಿಮೀಟರ್ = _ _ _ _ _ _ _ _ _ _ _ _ _ _ ಮೀಟರ್ _ _ _ _ _ _ _ _ _ _ _ _ _ _ ಸೆಂಟಿಮೀಟರ್

26 ಕಿಲೋಮೀಟರ್ = _ _ _ _ _ _ _ _ _ _ _ _ _ _ ಮೀಟರ್

1238 ಮೀಟರ್ = _ _ _ _ _ _ _ _ _ _ _ _ _ _ ಕಿಲೋಮೀಟರ್_ _ _ _ _ _ _ _ _ _ _ _ _ _ ಮೀಟರ್

12 ಸೆಂಟಿಮೀಟರ್ = _ _ _ _ _ _ _ _ _ _ _ _ _ _ ಮಿಲ್ಲಿಮೀಟರ್

8 ಮೀಟರ್ = _ _ _ _ _ _ _ _ _ _ _ _ _ _ ಸೆಂಟಿಮೀಟರ್

2 ಲೀಟರ್ = _ _ _ _ _ _ _ _ _ _ _ _ _ _ ಮಿಲ್ಲಿಲೀಟರ್

5 ಕಿಲೋಗ್ರಾಂ = _ _ _ _ _ _ _ _ _ _ _ _ _ _ ಗ್ರಾಂ;

1235 ಮಿಲ್ಲಿ ಗ್ರಾಂ = _ _ _ _ _ _ _ _ _ _ _ _ _ _ ಗ್ರಾಂ; _ _ _ _ _ _ _ _ _ _ _ _ _ _ ಮಿಲ್ಲಿ ಗ್ರಾಂ

1585 ಮಿಲ್ಲಿ ಲೀಟರ್ = _ _ _ _ _ _ _ _ _ _ _ _ _ _ ಲೀಟರ್ _ _ _ _ _ _ _ _ _ _ _ _ _ _ ಮಿಲ್ಲಿ ಲೀಟರ್

ಕೆಳಗೆ ಕೊಟ್ಟಿರುವ ಪ್ರತಿಯೊಂದು ಸೆಟ್ ಅಳತೆಗಳಲ್ಲಿ ದೊಡ್ಡ ಅಳತೆ ಯಾವುದು?

1. 124 ಮಿಲ್ಲಿಮೀಟರ್; 212 ಸೆಂಟಿಮೀಟರ್ 1 ಮೀಟರ್ [ ]
2. 3125 ಗ್ರಾಂ; 4175 ಮಿಲ್ಲಿ ಗ್ರಾಂ; 4 ಕಿಲೋಗ್ರಾಂ [ ]
3. 1275 ಮಿಲ್ಲಿ ಲೀಟರ್ ; 1 ಲೀಟರ್ [ ]

ದಶಮಾಂಶ ರೂಪಗಳು – 2

- ಈ ಸಂಖ್ಯೆಗಳನ್ನು ಬಿಡಿಸಿ ಬರೆಯಿರಿ

ಮಾದರಿ : $1286 = (1 \times 1000) + (2 \times 100) + (8 \times 10) + (6 \times 1)$

3457 = --

5240 = --

6034 = --

15005 = --

10018 = --

- ಈ ಭಿನ್ನರಾಶಿಗಳನ್ನು ಬಿಡಿಸಿ ಬರೆಯಿರಿ.

$$\frac{326}{1000} = \frac{3}{10} + \frac{2}{100} + \frac{6}{1000}$$

$$\frac{82}{100} = \frac{8}{10} + \frac{2}{100}$$

$\frac{365}{1000}$ = --

$\frac{420}{1000}$ = --

$\frac{308}{1000}$ = --

$\frac{40}{100}$ = --

6. ಸಂಖ್ಯೆಗಳು – 1

ಕೆಳಗೆ ಕೊಟ್ಟಿರುವ ಸಂಖ್ಯೆಗಳನ್ನು ವರ್ಗೀಕರಿಸಿ ಪಟ್ಟಿ ಮಾಡಿರುವುದನ್ನು ನೋಡಿರಿ.

428, 339, 376, 4020, 528, 336, 5050, 425, 3000, 892, 5160

ಸಂಖ್ಯೆಯ ಪ್ರತ್ಯೇಕತೆ	ಸಂಖ್ಯೆಗಳು	ಕಾರಣ
2 ರಿಂದ ಭಾಗಿಸಲು ಸಾಧ್ಯವಿರುವವುಗಳು	428, 376, 4020, 528, 336, 5050, 892 3000, 5160	ಒಂದುಗಳ ಸ್ಥಾನದಲ್ಲಿ 0, 2, 4, 6, 8 ಆಗಿದ್ದರೆ 2 ರಿಂದ ನಿಶ್ಶೇಷವಾಗಿ ಭಾಗಿಸಬಹುದು
3 ರಿಂದ ಭಾಗಿಸಲು ಸಾಧ್ಯವಿರುವವುಗಳು	339, 4020, 528, 336, 3000, 5160	ಅಂಕೆಗಳ ಮೊತ್ತವು 3ರ ಅಪವರ್ತ್ಯವಾಗಿದೆ. 3 + 3 + 9 = 15 5 + 2 + 8 = 15
4 ರಿಂದ ನಿಶ್ಶೇಷವಾಗಿ ಭಾಗಿಸಲು ಸಾಧ್ಯವಿರುವವುಗಳು	428, 376, 4020, 528, 336, 3000, 892, 5160	ಒಂದು ಮತ್ತು ಹತ್ತುಗಳ ಸ್ಥಾನದಲ್ಲಿರುವ ಸಂಖ್ಯೆಯನ್ನು ಒಟ್ಟಾಗಿ ತೆಗೆದಾಗ ಅದು 4ರ ಅಪವರ್ತ್ಯವಾಗಿರಬೇಕು. 28, 76, 20, ...
5 ರಿಂದ ನಿಶ್ಶೇಷವಾಗಿ ಭಾಗಿಸಲು ಸಾಧ್ಯವಿರುವವುಗಳು	4020, 5050, 425, 3000, 5160	ಒಂದುಗಳ ಸ್ಥಾನದಲ್ಲಿ 0, 5 ಇವುಗಳಲ್ಲೊಂದು ಬಂದ ಕಾರಣ

ಕೆಳಗೆ ಕೊಟ್ಟಿರುವ ಕೋಣೆಗಳಲ್ಲಿ ಪ್ರತಿಯೊಂದು ಸಂಖ್ಯೆಯಿಂದ ನಿಶ್ಶೇಷವಾಗಿ ಭಾಗಿಸಲು ಸಾಧ್ಯವಿರುವ ಮೂರಂಕೆ ಸಂಖ್ಯೆಗಳನ್ನು ಬರೆಯಿರಿ (5 ಸಂಖ್ಯೆಯಂತೆ)

2 ರಿಂದ	3 ರಿಂದ	4 ರಿಂದ	5 ರಿಂದ

ಸಂಖ್ಯೆಗಳು – 2

- ಒಂದು ಮತ್ತು ಅದೇ ಸಂಖ್ಯೆಯಿಂದ ಮಾತ್ರ ಭಾಗಿಸಲು ಸಾಧ್ಯವಿರುವ ಸಂಖ್ಯೆಗಳಾಗಿವೆ ಅವಿಭಾಜ್ಯ ಸಂಖ್ಯೆಗಳು.

  ಉದಾ: 7ನ್ನು 1 ರಿಂದ ಮತ್ತು 7 ರಿಂದ ಮಾತ್ರವೇ ಭಾಗಿಸಲು ಸಾಧ್ಯವಿರುವುದು.

  20 ಕ್ಕಿಂತ ಕೆಳಗಿರುವ ಎಲ್ಲಾ ಅವಿಭಾಜ್ಯ ಸಂಖ್ಯೆಗಳನ್ನು ಬರೆಯಿರಿ.

- ಒಂದು ಸಂಖ್ಯೆಯನ್ನು ನಿಶ್ಶೇಷವಾಗಿ ಭಾಗಿಸಲು ಸಾಧ್ಯವಿರುವ ಎಲ್ಲಾ ಸಂಖ್ಯೆಗಳು ಆ ಸಂಖ್ಯೆಯ ಅಪವರ್ತನವಾಗಿದೆ.

  ಉದಾ : 20ನ್ನು ನಿಶ್ಶೇಷವಾಗಿ ಭಾಗಿಸಲು ಸಾಧ್ಯವಿರುವ ಸಂಖ್ಯೆಗಳು 1, 2, 4, 5, 10, 20 ಎಂಬಿವುಗಳಾಗಿವೆ. ಈ ಸಂಖ್ಯೆಗಳು 20 ರ ಅಪವರ್ತನಗಳಾಗಿವೆ.

- 1 ರಿಂದ 20ರ ವರೆಗಿನ ಸಂಖ್ಯೆಗಳ ಎಲ್ಲಾ ಅಪವರ್ತನಗಳನ್ನು ಬರೆಯಿರಿ.

ಸಂಖ್ಯೆ	ಅಪವರ್ತನಗಳು
1	
2	
3	
4	
5	
6	
7	
8	
9	
10	
11	
12	
13	
14	
15	
16	
17	
18	
19	
20	

ಸಂಖ್ಯೆಗಳು – 3

- ಯಾವುದೇ ಭಾಜ್ಯ ಸಂಖ್ಯೆಯನ್ನು ಅವಿಭಾಜ್ಯ ಸಂಖ್ಯೆಗಳ ಗುಣಲಬ್ಧವಾಗಿ ಬರೆಯಬಹುದು.

  $4 = 2 \times 2$ $\quad\quad$ $20 = 2 \times 2 \times 5$

  $6 = 2 \times 3$ $\quad\quad$ $50 = 2 \times 5 \times 5$

  $8 = 2 \times 2 \times 2$

  $9 = 3 \times 3$

- ಒಂದು ಸಂಖ್ಯೆಯನ್ನು ಅವಿಭಾಜ್ಯ ಅಪವರ್ತನಗಳಾಗಿ ವಿಂಗಡಿಸಿ ಬರೆಯಲು ಆ ಸಂಖ್ಯೆಯನ್ನು ಅವಿಭಾಜ್ಯ ಸಂಖ್ಯೆಯಿಂದ ಭಾಗಿಸಿದರೆ ಸಾಕು.

  ಉದಾ : $40\ (40 \div 2 = 20,\ \ 20 \div 2 = 10,\ 10 \div 2 = 5)$

  $40 = 2 \times 2 \times 2 \times 5$

ಇನ್ನೊಂದು ರೀತಿಯಲ್ಲಿ ಹೀಗೂ ಮಾಡಬಹುದು.

$40 = 5 \times 2 \times 2 \times 2$



ಇನ್ನೊಂದು ರೀತಿಯಲ್ಲಿ

2 | 40
2 | 20
2 | 10
5

$40 = 2 \times 2 \times 2 \times 5$

ಇನ್ನು ಈ ಸಂಖ್ಯೆಗಳನ್ನು ಅವಿಭಾಜ್ಯ ಸಂಖ್ಯೆಗಳ ಗುಣಲಬ್ಧವಾಗಿ ಬರೆಯಿರಿ.

1. 70 = _

2. 99 = _

3. 100 = _

4. 200 = _

5. 150 = _

7. ದಶಮಾಂಶ ರೀತಿ – 1

- ಭಿನ್ನರಾಶಿಗಳನ್ನು ದಶಮಾಂಶ ರೂಪಕ್ಕೆ ಬದಲಾಯಿಸಿ ಬರೆಯಿರಿ.

ಉದಾ : • $\frac{1}{10} = 0.1$ • $\frac{4}{100} = 0.04$ • $\frac{3}{1000} = 0.003$ • $2\frac{3}{10} = 2.3$

- $\frac{3}{10}$ = - - - - - • $\frac{14}{100}$ = - - - - - • $\frac{252}{1000}$ = - - - - -
- $\frac{7}{10}$ = - - - - - • $\frac{7}{100}$ = - - - - - • $\frac{7}{1000}$ = - - - - -
- $\frac{25}{10}$ = - - - - - • $\frac{25}{100}$ = - - - - - • $\frac{25}{1000}$ = - - - - -
- $3\frac{2}{10}$ = - - - - - • $4\frac{3}{100}$ = - - - - - • $5\frac{2}{1000}$ = - - - - -

- ದಶಮಾಂಶ ಸಂಖ್ಯೆಗಳನ್ನು ಭಿನ್ನರಾಶಿ ರೂಪಕ್ಕೆ ಬದಲಾಯಿಸಿ ಬರೆಯಿರಿ.

ಉದಾ : • $0.2 = \frac{2}{10}$ • $0.41 = \frac{41}{100}$ • $0.416 = \frac{416}{1000}$

- 0.4 = - - - - - 0.37 = - - - - - 0.325 = - - - - -
- 0.9 = - - - - - 0.09 = - - - - - 0.009 = - - - - -
- 2.3 = - - - - - 0.23 = - - - - - 0.023 = - - - - -

- ಗುಣಲಬ್ಧವನ್ನು ಬಾಯಿ ಲೆಕ್ಕವಾಗಿ ಮಾಡಿ ಬರೆಯಿರಿ.

- 2×10 = - - - - - 3×100 = - - - - -
- 26×1000 = - - - - - 35×100 = - - - - -
- 40×100 = - - - - - 32×1000 = - - - - -

ದಶಮಾಂಶ ರೀತಿ – 2

ಉದಾ : 2.25 + 0.5 = 2.75

- ಮೊತ್ತ ಕಂಡುಹಿಡಿಯಿರಿ.
  - 0.5 + 0.25 + 0.75 = ------------------------------
  - 0.25 + 1.43 + 0.006 = ------------------------------
  - 1.45 + 0.732 + 0.4 = ------------------------------
  - 4.2 + 4.02 + 4.002 = ------------------------------
- ವ್ಯತ್ಯಾಸ ಕಂಡುಹಿಡಿಯಿರಿ.
  - 1.5 – 0.25 =________
  - 2.5 – 0.75 = ________
  - 3.47 – 1.24 = ________
  - 5.82 – 0.06 = ________
  - 12.43 – 1.3 = ________
  - 8.67 – 1.006 = ________
  - 3.4 – 0.005 = ________
  - 0.04 – 0.004 = ________
- ಭರ್ತಿಗೊಳಿಸಿರಿ.
  - 8.42 ಮೀಟರ್ = 8 ಮೀಟರ್ 42 ಸೆಂಟಿಮೀಟರ್
  - 3.5 ಸೆಂಟಿಮೀಟರ್ = 3 ಸೆಂಟಿಮೀಟರ್ 5 ಮಿಲ್ಲಿ ಮೀಟರ್
  - 12.75 ಮೀಟರ್ = _ _ _ _ ಮೀಟರ್ _ _ _ _ ಸೆಂಟಿಮೀಟರ್
  - 4.5 ಮೀಟರ್ = _ _ _ _ ಮೀಟರ್ _ _ _ _ ಸೆಂಟಿಮೀಟರ್
  - 7.5 ಸೆಂಟಿಮೀಟರ್ = _ _ _ _ ಸೆಂಟಿಮೀಟರ್ _ _ _ _ ಮಿಲ್ಲಿ ಮೀಟರ್
  - 14.5 ಕಿಲೋಗ್ರಾಂ = _ _ _ _ ಕಿಲೋಗ್ರಾಂ _ _ _ _ ಗ್ರಾಂ
  - 3.750 ಲೀಟರ್ = _ _ _ _ ಲೀಟರ್ _ _ _ _ ಮಿಲ್ಲಿ ಲೀಟರ್
  - 7.5 ಲೀಟರ್ = _ _ _ _ ಲೀಟರ್ _ _ _ _ ಮಿಲ್ಲಿ ಲೀಟರ್

8. ಕೋನಗಳು ಸೇರುವಾಗ – 1

ಈ ಕೆಳಗಿನ ಚಿತ್ರಗಳನ್ನು ಕಂಪಾಸು ಪೆಟ್ಟಿಗೆಯ ಮಟ್ಟವನ್ನು ಉಪಯೋಗಿಸಿ ರಚಿಸಲಾಗಿದೆ.



- ಪ್ರತಿಯೊಂದು ಕೋನದ ಅಳತೆಯನ್ನು ಬರೆಯಿರಿ.

$\angle A =$ ---------- $\angle B =$ ---------- $\angle C =$ ----------

$\angle D =$ ---------- $\angle E =$ ---------- $\angle F =$ ----------

- ಎರಡು ಮಟ್ಟಗಳ ಒಂದೊಂದು ಮೂಲೆಯನ್ನು ಸೇರಿಸಿ ಇಟ್ಟು ಕೆಳಗೆ ಕೊಟ್ಟಿರುವ ಅಳತೆಗಳಲ್ಲಿ ಕೋನ ರಚಿಸಿರಿ.

135°

75°

ಕೋನಗಳು ಸೇರುವಾಗ – 2



- ಈ ಚಿತ್ರದಲ್ಲಿ ಒಟ್ಟು ಎಷ್ಟು ಕೋನಗಳಿವೆ?
- ಎಲ್ಲಾ ಕೋನಗಳನ್ನು ಕಂಡುಹಿಡಿದು ಅವುಗಳ ಹೆಸರು ಮತ್ತು ಅಳತೆಯನ್ನು ಬರೆಯಿರಿ.



- ಈ ಚಿತ್ರದಲ್ಲಿರುವ ಕೋನಗಳು ಯಾವುವು?
- ಪ್ರತಿಯೊಂದನ್ನು ಅಳೆದು ಬರೆಯಿರಿ.

9. ನೂರರಲ್ಲೆಷ್ಟು? – 1

- ಭಾಗಲಬ್ಧವನ್ನು ಬರೆಯಿರಿ.
  - 300 ÷ 100 = 3
  - 1500 ÷ 100 = 15
  - 2400 ÷ 100 = _ _ _ _ _
  - 4800 ÷ 100 = _ _ _ _ _
  - 10000 ÷ 100 = _ _ _ _ _
  - 24000 ÷ 100 = _ _ _ _ _
- ಭಾಗಲಬ್ಧ ಮತ್ತು ಶೇಷವನ್ನು ಬರೆಯಿರಿ.
  - 340 ÷ 100 = ಭಾಗಲಬ್ಧ 3 ಶೇಷ 40
  - 420 ÷ 100 = _ _ _ _ _ _ _ _ _ _ _ _ _ _ _ _ _ _
  - 3250 ÷ 100 = _ _ _ _ _ _ _ _ _ _ _ _ _ _ _ _ _ _
  - 4225 ÷ 100 = _ _ _ _ _ _ _ _ _ _ _ _ _ _ _ _ _ _
- ದಶಮಾಂಶ ರೂಪ ಬರೆಯಿರಿ.
  - $\frac{215}{100} = 2.15$
  - $\frac{85}{100}$ = _ _ _ _ _ _ _ _ _
  - $\frac{324}{100}$ = _ _ _ _ _ _ _ _ _
  - $\frac{1222}{100}$ = _ _ _ _ _ _ _ _ _
  - $\frac{4270}{100}$ = _ _ _ _ _ _ _ _ _
  - $\frac{1250}{100}$ = _ _ _ _ _ _ _ _ _
- ಗುಣಲಬ್ಧ ಕಂಡುಹಿಡಿದು ಬರೆಯಿರಿ.
  - 42 × 18 = _ _ _ _ _
  - 6 × 0.08 = _ _ _ _ _
  - 4.2 × 18 = _ _ _ _ _
  - 60 × 0.08 = _ _ _ _ _
  - 0.42 × 18 = _ _ _ _ _
  - 600 × 0.08 = _ _ _ _ _
  - 420 × 18 = _ _ _ _ _
  - 6000 × 0.08 = _ _ _ _ _

ನೂರರಲ್ಲೆಷ್ಟು? – 2

1. ಈ ಕ್ರಿಯೆಗಳ ಉತ್ತರ ಕಂಡುಹಿಡಿದು ಬರೆಯಿರಿ.

ಉದಾ : • $\frac{24}{100} \times 12 = \frac{288}{100} = 2.88$ $\left[\frac{24 \times 12}{100}\right]$

0.24×12 ಕ್ರಿಯೆಯನ್ನು ಮಾಡಿದರೂ ಸಾಕು. $\left(\frac{24}{100} = 0.24\right)$

- $352 \times \frac{8}{100} = \frac{2816}{100} = 28.16$

  $352 \times 0.08 = 28.16$, ಇಲ್ಲಿ $\left(\frac{8}{100} = 0.08\right)$

- $200 \times \frac{12}{100} = \frac{2400}{100} = 24$
- $3200 \times \frac{5}{100} =$ ---------- = ----------
- $1250 \times \frac{4}{100} =$ ---------- = ----------
- $1560 \times \frac{10}{100} =$ ---------- = ----------
- $1422 \times \frac{2}{100} =$ ---------- = ----------

2. ಭಾಗ ಮತ್ತು ಮಡಿಯನ್ನು ಹೇಳುವ.

- 10ರ 4 ಮಡಿಯಾಗಿದೆ 40

  40 ರ $\frac{1}{10}$ ಭಾಗವಾಗಿದೆ 4

  40 ರ $\frac{1}{4}$ ಭಾಗವಾಗಿದೆ 10

- 4ರ 10 ಮಡಿಯಾಗಿದೆ 40

- 5ರ 6 ಮಡಿಯಾಗಿದೆ 30 ----------

  30 ರ $\frac{1}{5}$ ಭಾಗವಾಗಿದೆ 6,

- 6ರ 5 ಮಡಿಯಾಗಿದೆ ----------

  30 ರ $\frac{1}{6}$ ಭಾಗವಾಗಿದೆ 5

- 7 ರ ---------- 35. ---------- ----------
- 3 ರ $1\frac{1}{2}$ ಮಡಿಯಾಗಿದೆ $4\frac{1}{2}$. $\left(1\frac{1}{2} = \frac{3}{2}\right)$

  $4\frac{1}{2}$ ರ $\frac{2}{3}$ ಭಾಗವಾಗಿದೆ 3.

- 8 ರ $1\frac{1}{4}$ ಮಡಿಯಾಗಿದೆ 10. ---------- ----------

10. ಅಕ್ಷರ ಗಣಿತ – 1

1. ಪ್ರತಿಯೊಂದು ಚಟುವಟಿಕೆಯ ಉತ್ತರವನ್ನು ಕಂಡುಹಿಡಿಯಿರಿ. ಈ ಆಯತದ ಸುತ್ತಳತೆ ಎಷ್ಟು? (ಅಳತೆ ಸೆಂಟಿಮೀಟರ್‌ನಲ್ಲಿದೆ)

ಉತ್ತರ :

2. ಈ ಆಯತದ ವಿಸ್ತೀರ್ಣವೆಷ್ಟು?

ಉತ್ತರ :

3. ಈ ಚೌಕದ ವಿಸ್ತೀರ್ಣ ಮತ್ತು ಸುತ್ತಳತೆಯನ್ನು ಕಂಡುಹಿಡಿಯಿರಿ.



ಉತ್ತರ :

4. ಈ ತ್ರಿಕೋನದ ಸುತ್ತಳತೆಯನ್ನು ಕಂಡುಹಿಡಿಯಿರಿ.



ಉತ್ತರ :

ಅಕ್ಷರ ಗಣಿತ – 2

- ಪ್ರತಿಯೊಂದು ಸೆಟ್‌ನಲ್ಲಿಯೂ ಕೊಟ್ಟಿರುವ ಸಂಖ್ಯೆಯ ಹಿಂದಿನ ಮತ್ತು ಮುಂದಿನ ಎಣಿಕಾ ಸಂಖ್ಯೆಯನ್ನು ಬರೆಯಿರಿ.

  - ______, 39, ______ • ______, 60, ______ • ______, 129, ______

  ಒಂದು ಸಂಖ್ಯೆ ಮತ್ತು ಅದರ ಹಿಂದಿನ ಸಂಖ್ಯೆಯ ನಡುವಿನ ಸಂಬಂಧವೇನು?

  ಒಂದು ಸಂಖ್ಯೆ ಮತ್ತು ಅದರ ಮುಂದಿನ ಸಂಖ್ಯೆಯ ನಡುವಿನ ಸಂಬಂಧವೇನು?

- ಒಂದು ಕ್ಯಾಲೆಂಡರಿನಲ್ಲಿರುವ ಕೋಣೆಗಳನ್ನು ಕೆಳಗೆ ಸೂಚಿಸಲಾಗಿದೆ. ಎಲ್ಲಾ ಸಂಖ್ಯೆಗಳನ್ನು ಬರೆದು ಕ್ಯಾಲೆಂಡರ್ ಪೂರ್ತಿಗೊಳಿಸಿರಿ.

			22			

ಉತ್ತರ ಹೇಳಿರಿ

- ಕ್ಯಾಲೆಂಡರಿನ ಒಂದು ಸಂಖ್ಯೆಗೆ ಅದರ ಬಲಭಾಗದಲ್ಲಿರುವ ಸಂಖ್ಯೆಯೊಂದಿಗಿರುವ ಸಂಬಂಧವೇನು?
- ಎಡಭಾಗದಲ್ಲಿರುವ ಸಂಖ್ಯೆಯೊಂದಿಗೆ, ಮೇಲೆಯಿರುವ ಸಂಖ್ಯೆಯೊಂದಿಗೆ, ಕೆಳಗೆಯಿರುವ ಸಂಖ್ಯೆಯೊಂದಿಗೆ ಇರುವ ಸಂಬಂಧವೇನು?
- ಇತರ ಸಂಬಂಧಗಳನ್ನು ಕಂಡುಹಿಡಿದು ಹೇಳಿರಿ.

11. ಸ್ಟ್ಯಾಟಿಸ್ಟಿಕ್ಸ್

- ಒಂದು ಶಾಲೆಯ 1 ರಿಂದ 7ರ ವರೆಗಿನ ತರಗತಿಯಲ್ಲಿ ಕಲಿಯುವ ಮಕ್ಕಳ ಸಂಖ್ಯೆಯನ್ನು ಪಟ್ಟಿಯಲ್ಲಿ ಕೊಡಲಾಗಿದೆ. ಖಾಲಿ ಬಿಟ್ಟ ಕೋಣೆಗಳನ್ನು ಭರ್ತಿಗೊಳಿಸಿರಿ.

ತರಗತಿ	ಹುಡುಗರು	ಹುಡುಗಿಯರು	ಒಟ್ಟು
1	121	107	_____
2	98	_____	233
3	_____	125	216
4	103	108	_____
5	120	140	_____
6	109	_____	218
7	99	_____	203
ಒಟ್ಟು	_____	_____	_____

- ಪಟ್ಟಿಯನ್ನು ಆಧಾರವಾಗಿಟ್ಟುಕೊಂಡು ವ್ಯತ್ಯಸ್ತವಾದ 5 ಪ್ರಶ್ನೆಗಳನ್ನು ಮತ್ತು ಅವುಗಳ ಉತ್ತರವನ್ನೂ ಬರೆಯಿರಿ.